ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

**ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017-18**

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ:17-07-2017

**ಸುತ್ತೋಲೆ**

ವಿಷಯ: ಪರಿಸರ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ
ಉಲ್ಲೇಖ: ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/2017-18/139 ದಿನಾಂಕ: 13.07.2017

*****

ಮೇಲಿನ ವಿಷಯಕ್ಕೆ ಸಂಬಂದಪಟ್ಟಂತೆ, ಇತ್ತೀಚಿನ ದಿನಗಳಲ್ಲಿ ಮಳೆ ಕಡಿಮೆಯಾಗಿ ಬರಗಾಲ ಆವರಿಸುತ್ತಿರುವುದು ತಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಇದರಿಂದ ಗಿಡ ಮರಗಳನ್ನು ನೆಟ್ಟು ಪರಿಸರವನ್ನು ಬೆಳೆಸುವುದು ಮತ್ತು ಪರಿಸರದ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಾಗಿದೆ. ಈ ದಿಸೆಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಸರ ಜಾಗ್ರತೆ ಮೂಡಿಸುವುದು.

1. ಪಾಲಿಟೆಕ್ನಿಕ್‌ಗಳು, ವಠಾರ ಹಾಗೂ ದತ್ತು ಗ್ರಾಮ, ಇತರ ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು.
2. ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಪರಿಸರದ ಕುರಿತಾದ ತರಬೇತಿ ಕಾರ್ಯಕ್ರಮಗಳು ಮತ್ತು ಉಪನ್ಯಾಸಗಳು.
3. ನೀರು ಹಿಂಗಿಸುವಿಕೆ, ಕೊಳವೆಬಾವಿಗಳ ನೀರುಮರಣ, ಕೆರೆಗಳ ಸ್ವಚ್ಚತೆ, ಹೂಳೆತ್ತುವಿಕೆ

ಮೇಲಿನ ಕಾರ್ಯಕ್ರಮಗಳನ್ನು ಈ ಮಳೆಗಾಲ ಅಂದರೆ ಜೂನ್ ನಿಂದ ಆಗಸ್ಟ್‌ವರೆಗೆ ಹಮ್ಮಿಕೊಂಡು ಈ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಎಲ್ಲಾ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಯಾ ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡಲು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿಗಳು:

1. ರಾಜ್ಯದ ಎಲ್ಲಾ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರ-ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ.